# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\1628\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 13/11/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ ಹಲಗೇರಿ ಗ್ರಾಮ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಚನ್ನಬಸಪ್ಪ ಬಸಪ್ಪ ಬಿದರಿ (ಪ್ರಸ್ತುತ ನಿವೃತ್ತ), 2)ಕರ ವಸೂಲಿಗಾರರಾಗಿದ್ದ ಶ್ರೀ.ಕರಬಸಪ್ಪ ಬಸಪ್ಪ ನೇಶ್ವಿ (ಪ್ರಸ್ತುತ ವಾಟರ್‌ಮನ್), 3) ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಅಶೋಕ್ ನಾರಜ್ಜಿ (ಪ್ರಸ್ತುತ ಸಹಾಯಕ ನಿರ್ದೇಶಕರು[ಗ್ರಾ.ಉ], ರಾಣೇಬೆನ್ನೂರು ತಾಲ್ಲೂಕ್ ಪಂಚಾಯತ್) ಮತ್ತು 4) ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಡಾ॥ಪರಮೇಶ ಎನ್ ಹುಬ್ಬಳ್ಳಿ (ಪ್ರಸ್ತುತ ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಹಾವೇರಿ) ರವರ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

**********

ಶ್ರೀ.ನಾಗರಾಜ್ ದೇವೇಂದ್ರಪ್ಪ ನೇಶ್ವಿ, ಹಲಗೇರಿ ರವರ ದಿನಾಂಕ:28/08/17ರ ದೂರು ಅರ್ಜಿಯ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಈ ಸಂಸ್ಥೆಯ ಆರಕ್ಷಕ ಮಹಾ ನಿರ್ದೇಶಕರವರಿಗೆ ಆದೇಶಿಸಿದನ್ವಯ, ಹಾವೇರಿ ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ "ತನಿಖಾಧಿಕಾರಿಗಳು" ಎಂದು ಕರೆಯಲ್ಪಡುತ್ತಾರೆ) ರವರು ಸಲ್ಲಿಸಿದ ತನಿಖಾ ವರದಿಯ ಮೇಲೆ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ ಹಲಗೇರಿ ಗ್ರಾಮ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಚನ್ನಬಸಪ್ಪ ಬಸಪ್ಪ ಬಿದರಿ (ಪ್ರಸ್ತುತ ನಿವೃತ್ತ), 2) ಕರ ವಸೂಲಿಗಾರರಾಗಿದ್ದ ಶ್ರೀ.ಕರಬಸಪ್ಪ ಬಸಪ್ಪ ನೇಶ್ವಿ (ಪ್ರಸ್ತುತ ವಾಟರ್‌ಮನ್), 3) 2ನೇ ದರ್ಜೆ ಕಾರ್ಯದರ್ಶಿಯಾಗಿದ್ದ ಶ್ರೀ.ಮಾರ್ತಾಂಡಪ್ಪ ಹೆಗ್ಗಪ್ಪ ಮಡಿವಾಳರ (ಪ್ರಸ್ತುತ ನಿಟ್ಟೂರು ಗ್ರಾಮ ಪಂಚಾಯತ್), 4)ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಅಶೋಕ್ ನಾರಜ್ಜಿ (ಪ್ರಸ್ತುತ ಸಹಾಯಕ ನಿರ್ದೇಶಕರು[ಗ್ರಾ.ಉ], ರಾಣೇಬೆನ್ನೂರು ತಾಲ್ಲೂಕ್ ಪಂಚಾಯತ್) ಮತ್ತು 5) ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಡಾ॥ಪರಮೇಶ ಎನ್ ಹುಬ್ಬಳ್ಳಿ (ಪ್ರಸ್ತುತ ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಹಾವೇರಿ)

ರವರ [ಇನ್ನು ಮುಂದೆ '1 ರಿಂದ 5ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ] ರವರುಗಳ ವಿರುದ್ಧದ ಕರ್ತವ್ಯ ಲೋಪ \ ದುರ್ನಡತೆಯ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 7(2)ರ ಅಡಿಯಲ್ಲಿ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡಿದೆ.

2. ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ –

ಒಂದನೇ ಎದುರುದಾರರು ದಿನಾಂಕ:27/03/07 ರಿಂದ 15/09/09 ರವರೆಗೆ ರಾಣೇಬೆನ್ನೂರು ತಾಲ್ಲೂಕ್ ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಆ ಅವಧಿಯಲ್ಲಿ ಎರಡು ಠರಾವು ವಹಿಗಳನ್ನು ನಿರ್ವಹಿಸುತ್ತಿದ್ದು, ಅಸಲೀ ಠರಾವು ವಹಿಯಲ್ಲಿರುವುದನ್ನು 2ನೇ ಠರಾವು ವಹಿಯಲ್ಲಿ ದಾಖಲಿಸಲು 1ನೇ ಎದುರುದಾರರ ಖಾಸಗಿ ವ್ಯಕ್ತಿ–ಶ್ರೀ.ಮಂಜಪ್ಪ ಹೊಸಮನಿ ಎಂಬುವವರಿಗೆ ಸೂಚಿಸುತ್ತಿದ್ದರು. ಆದರೆ, ಸದರಿ ಶ್ರೀ.ಮಂಜಪ್ಪ ಹೊಸಮನಿ ರವರು ಅಸಲಿ ಠರಾವು ವಹಿಯಲ್ಲಿ ಇರುವುದನ್ನೇ ನಕಲು ಮಾಡದೇ, ಸುಳ್ಳು ನಡವಳಿಯನ್ನು 2ನೇ ಠರಾವು ವಹಿಯಲ್ಲಿ ದಾಖಲಿಸುತ್ತಿದ್ದುದ್ದಲ್ಲದೇ, ಜಾಗವನ್ನು ಖಾಲಿ ಬಿಡುತ್ತಿದ್ದರು. ದಿನಾಂಕ:15/05/01ರಂದು ನಡೆದ ಪಂಚಾಯತ್ ಸಭೆಯಲ್ಲಿ ವಿಷಯ ಸಂಖ್ಯೆ:4/16ರ ಅಡಿಯಲ್ಲಿ ಶ್ರೀ.ನಾಗರಾಜ್ ದೇವೇಂದ್ರಪ್ಪ ನೇಶ್ವಿ ಎಂಬುವವರನ್ನು ಹಲಗೇರಿ ಗ್ರಾಮ ಪಂಚಾಯತ್‌ನ ಕರ ವಸೂಲಿಗಾರರ ಹುದ್ದೆಗೆ ನೇಮಕ ಮಾಡಲು ತೀರ್ಮಾನಿಸಿದ್ದು, ಅದರಂತೆ ಸದರಿಯವರು ಸದರಿ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿನಾಂಕ:15/01/09ರಂದು ನಡೆದ ಪಂಚಾಯತ್ ಸಭೆಯಲ್ಲಿ ಶ್ರೀ.ಕರಬಸಪ್ಪ ನೇಶ್ವಿ (2ನೇ ಎದುರುದಾರರು) ಎಂಬುವವರನ್ನು ಹಲಗೇರಿ ಗ್ರಾಮ ಪಂಚಾಯತ್‌ನ ಕರ ವಸೂಲಿಗಾರರ ಹುದ್ದೆಗೆ ನೇಮಕ ಮಾಡುವ ಬಗ್ಗೆ ಯಾವುದೇ ಚರ್ಚೆ ನಡೆಯದೇ ಇದ್ದರೂ, ಮೇಲೆ ಹೇಳಿದ ಶ್ರೀ.ಮಂಜಪ್ಪ ಹೊಸಮನಿ ರವರು 2ನೇ ಎದುರುದಾರರ ಚಿತಾವಣೆಯ ಮೇರೆಗೆ ಆ ದಿನ ನಡೆದ ಪಂಚಾಯತ್ ಸಭೆಯಲ್ಲಿ ವಿಷಯ ಸಂಖ್ಯೆ:4ರಲ್ಲಿ ಸದರಿಯವರನ್ನು ಪಂಚಾಯತ್‌ನ ಕರ ವಸೂಲಿಗಾರರ ಹುದ್ದೆಗೆ ನೇಮಕ ಮಾಡಲಾಗಿದೆಯೆಂದು ದಾಖಲಿಸಿದ್ದಾರೆ. ಅದೇ ರೀತಿ, ಸದರಿಯವರು ಕರ ವಸೂಲಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದು ವೇತನ ಬಿಲ್ಲಿನಲ್ಲೂ ತಿದ್ದುಪಡಿ ಮಾಡಿದ್ದಾರೆ. 2ನೇ ಎದುರುದಾರರು ಸೃಷ್ಟಿಸಿದ ದಾಖಲೆಗಳು ಸುಳ್ಳೆಂದು ಗೊತ್ತಿದ್ದರೂ, 1ನೇ ಎದುರುದಾರರ ಕಾರ್ಯಾವಧಿಯ ನಂತರ ಸದರಿ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ 4ನೇ ಎದುರುದಾರರು ಸದರಿ ದಾಖಲೆಗಳು ನಿಜವಾದ ದಾಖಲೆಗಳೆಂದು ದೃಢೀಕರಿಸಿ, ಸದರಿಯವರನ್ನು ಕರವಸೂಲಿಗಾರರ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅನುಮೋದಿಸುವಂತೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. 4ನೇ ಎದುರುದಾರರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸದೇ 2ನೇ ಎದುರುದಾರರನ್ನು

BSM/1628/18



ಸದರಿ ಹುದ್ದೆಗೆ ನೇಮಕ ಮಾಡಿಕೊಳ್ಳಬಹುದೆಂದು 5ನೇ ಎದುರುದಾರರು ಶಿಫಾರಸ್ಸು ಮಾಡಿದ್ದಾರೆಂದು ಹೇಳಿದ್ದಾರೆ.

3. ತನಿಖಾ ವರದಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:27/03/07 ರಿಂದ 15/09/09 ರವರೆಗೆ ರಾಣೇಬೆನ್ನೂರು ತಾಲ್ಲೂಕ್ ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅವಧಿಯಲ್ಲಿ ತಾವು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ತಾವು ಎರಡು ನಡವಳಿ ವಹಿಗಳನ್ನು ನಿರ್ವಹಿಸಿಲ್ಲ. ಸದರಿ ಗ್ರಾಮ ಪಂಚಾಯತ್‌ನಿಂದ ತಾವು ವರ್ಗಾವಣೆಯಾಗಿ ಬಂದ ನಂತರ ಮುಂದಿನ ಸಿಬ್ಬಂದಿ ಶ್ರೀ.ಮಂಜಪ್ಪ ಹೊಸಮನಿ ರವರನ್ನು ಅಕ್ರಮ ನಡವಳಿಗಳನ್ನು ಬರೆಸಲು ಉಪಯೋಗಿಸಿಕೊಂಡಿದ್ದಾರೆ. ಸದರಿ ಅಕ್ರಮ ತಮ್ಮ ಕಾರ್ಯಾವಧಿಯಲ್ಲಿ ನಡೆದಿಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತನಿಖಾ ವರದಿಯಲ್ಲಿ ಹೇಳಿದ ಠರಾವು ವಹಿಯ ನಮೂದಿಗೂ ಮತ್ತು ತಮಗೂ ಯಾವುದೇ ಸಂಬಂಧವಿರುವುದಿಲ್ಲ. ತಮ್ಮ ನೇಮಕಾತಿಯು ನಿಯಮಾನುಸಾರವಾಗಿದ್ದು, ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಯವರು ವೇತನ ಬಟಾವಾಡೆ ಅಧಿಕಾರಿಯಾಗಿದ್ದಾರೆ. ತಮ್ಮ ಪದೋನ್ನತಿಯ ಪ್ರಸ್ತಾವನೆಯನ್ನು ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಯವರು ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿದ್ದು, ಸದರಿಯವರು ಪ್ರಸ್ತಾವನೆಯನ್ನು ಅಂಗೀಕರಿಸಿ, ಪದೋನ್ನತಿ ನೀಡಿದ್ದಾರೆ. ತಮಗೆ ಪದೋನ್ನತಿಯ ಬಗ್ಗೆ ಅಧಿಕೃತ ಜ್ಞಾಪನ ಹೊರಡಿಸಿದ ಎರಡು ವರ್ಷಗಳ ನಂತರ ದೂರುದಾರರು ದೂರನ್ನು ನೀಡಿರುವುದರಿಂದ, ಲೋಕಾಯುಕ್ತ ಅಧಿನಿಯಮ ಕಲಂ 8(2)(ಡಿ) ಅಡಿ ದೂರನ್ನು ತನಿಖೆಗೆ ಸ್ವೀಕರಿಸಲು ಅವಕಾಶ ಇರುವುದಿಲ್ಲ. ಸಕ್ಷಮ ಪ್ರಾಧಿಕಾರಕ್ಕೆ ದೂರುದಾರರು ದೂರು ಸಲ್ಲಿಸಿ, ತಮ್ಮ ಅಹವಾಲನ್ನು ಸರಿಪಡಿಸಿಕೊಳ್ಳುವ ಅವಕಾಶವಿದೆಯೆಂದು ಹೇಳಿದ್ದಾರೆ.

5. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:27/09/12ರವರೆಗೆ ಮಾತ್ರ ಹಲಗೆರೆ ಗ್ರಾಮ ಪಂಚಾಯತ್‌ನಲ್ಲಿ ಕರ ವಸೂಲಿಗಾರರಾಗಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ:28/09/12ರಂದು ಪದೋನ್ನತಿ ಹೊಂದಿ

ಕಾರ್ಯದರ್ಶಿ–ಗ್ರೇಡ್ 2 ಆಗಿ ಹಿರೇಕೆರೂರು ತಾಲ್ಲೂಕ್ ಸುತ್ತಕೋಟಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯ ವರದಿ ಮಾಡಿಕೊಂಡಿದ್ದು, 2ನೇ ಎದುರುದಾರರಿಗೆ ಸಂಬಂಧಿಸಿದ ನೇಮಕಾತಿ \ ಪದೋನ್ನತಿ ಯಲ್ಲಿ ತಮ್ಮ ಪಾತ್ರ ಇರುವುದಿಲ್ಲ. ದಿನಾಂಕ:08/05/07ರಂದು ಜರುಗಿದ ಹಲಗೆರೆ ಗ್ರಾಮ ಪಂಚಾಯತ್‌ನ ಸಭೆಯ ಠರಾವಿನ ಬಗ್ಗೆ ಕರಡು ಠರಾವನ್ನು ಬರೆದುಕೊಡುವಂತೆ, ಅದನ್ನು ತಾವು ಸಭೆಯಲ್ಲಿ ಚರ್ಚಿಸಿ, ನಿರ್ಣಯ ತೆಗೆದುಕೊಳ್ಳಲು ಅಧ್ಯಕ್ಷರು ಮತ್ತು ಸದಸ್ಯರಿಗೆ ಮನವಿ ಮಾಡಿಕೊಳ್ಳುವುದಾಗಿ ದೂರುದಾರರು ತಮ್ಮ ಬಳಿ ಬಂದಿದ್ದು, ಅದರಂತೆ ತಾವು ಕಚ್ಚಾ ಹೇಳಿಕೆಯನ್ನು ಅವರಿಗೆ ಬರೆದುಕೊಟ್ಟಿರುವುದೇ ಹೊರತು ಗ್ರಾಮ ಪಂಚಾಯತ್‌ನ ದಾಖಲೆಗಳಲ್ಲಿ ಯಾವುದೇ ಸುಳ್ಳು ನಮೂದು ಮಾಡಿಲ್ಲ. ಠರಾವು ವಹಿಯು ಪಿಡಿಓ ರವರ ಸುಪರ್ದಿಯಲ್ಲಿರುವ ದಾಖಲೆಯಾಗಿದ್ದು, ಅದರಲ್ಲಿ ಇತರೆ ಯಾರೂ ಸಹ ಹಸ್ತಕ್ಷೇಪ ಮಾಡಲು ಅವಕಾಶವಿಲ್ಲ. ದೂರುದಾರರೇ ಸ್ವತಃ ಶ್ರೀ.ಮಂಜಪ್ಪ ಹೊಸಮನಿ ಮುಖಾಂತರ ಠರಾವು ವಹಿಯಲ್ಲಿ ಅಕ್ರಮ ಮಾಡಿರುವುದು ಸಾಬೀತಾಗಿದೆಯೆಂದು ಹೇಳಿದ್ದಾರೆ.

6. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಆಪಾದನೆಯಲ್ಲಿರುವ ಗ್ರಾಮ ಪಂಚಾಯತ್ ಠರಾವು ದಿನಾಂಕ:15/01/09 ಆಗಿದ್ದು, ತಾವು ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ:21/10/13 ರಿಂದ 13/09/16ರವರೆಗೆ ಕರ್ತವ್ಯ ನಿರ್ವಹಿಸಿದ್ದರಿಂದ, ತಾವು ಸದರಿ ಪಂಚಾಯತ್‌ನಲ್ಲಿ ಕಾರ್ಯ ವರದಿ ಮಾಡಿಕೊಳ್ಳುವ 4 ವರ್ಷಗಳ ಹಿಂದಿನ ಠರಾವಿನ ಬಗ್ಗೆ ತಮಗೆ ಯಾವುದೇ ಅನುಮಾನ ಬಾರದಿದ್ದ ಕಾರಣ, 2ನೇ ಎದುರುದಾರರು ಡಿಸೆಂಬರ್, 2005ರಲ್ಲಿ ವಾಟರ್‌ಮನ್ ಆಗಿ ಪಡೆದ ವೇತನ ಬಿಲ್ಲಿನ ನಕಲು ಪ್ರತಿಯನ್ನು ಪಂಚಾಯತ್‌ನಲ್ಲಿ ಲಭ್ಯವಿರುವ ಇತರೆ ದಾಖಲೆಗಳನ್ನು ಪರಿಶೀಲಿಸಿ, ಪ್ರಸ್ತಾವನೆಯನ್ನು ತಾಲ್ಲೂಕ್ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆಯೆಂದು ಹೇಳಿದ್ದಾರೆ.

7. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ರಾಣೇಬೆನ್ನೂರು ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ದಿನಾಂಕ:27/09/14 ರಿಂದ 10/09/15ರವರೆಗೆ ನಿರ್ವಹಿಸಿದ್ದು, 4ನೇ ಎದುರುದಾರರು ದಿನಾಂಕ:25/10/14ರ ತಮ್ಮ ಪತ್ರದೊಂದಿಗೆ 2ನೇ ಎದುರುದಾರರಿಗೆ ಸಂಬಂಧಪಟ್ಟ ದಾಖಲೆಗಳನ್ನು ದೃಢೀಕರಿಸಿ, ಸದರಿಯವರು ದಿನಾಂಕ:15/12/05 ರಿಂದ ಸೆಪ್ಟೆಂಬರ್, 2014 ರವರೆಗೆ ಸಲ್ಲಿಸಿದ ಸೇವಾ ದೃಢೀಕರಣ ಪತ್ರ ಮುಂತಾದ ದಾಖಲೆಗಳಿರುವ ಕಡತವನ್ನು ಅನುಮೋದನೆಗಾಗಿ ಸಲ್ಲಿಸಿಕೊಂಡಿದ್ದು, ಎರಡು ಕಛೇರಿ ಕೆಲಸಗಳ ಒತ್ತಡ ಹೆಚ್ಚಾಗಿದ್ದರಿಂದ, ಸಲ್ಲಿಸಿಕೊಂಡ ಪ್ರಸ್ತಾವನೆಯಲ್ಲಿನ ದಾಖಲಾತಿಗಳನ್ನು ಪರಿಶೀಲನೆ ಮಾಡಿ, ಸಹಿಗಾಗಿ ಮಂಡಿಸುವಂತೆ ಸೂಚಿಸಿ, ದಾಖಲಾತಿಗಳನ್ನು ತಾಲ್ಲೂಕ್ ಪಂಚಾಯತ್ ಕಛೇರಿ ವ್ಯವಸ್ಥಾಪಕರಾದ ಶ್ರೀ.ಬಸವೇಶ ಶಿವಪ್ಪ ಶಿಡೇನೂರ ರವರಿಗೆ ನೀಡಿದ್ದು, ಸದರಿಯವರು ದಾಖಲೆಗಳನ್ನು

BS ಉ/1628/18



ಪರಿಶೀಲಿಸಿ, ಸಹಿಗಾಗಿ ಮೇಲು ಪತ್ರದೊಂದಿಗೆ ಚೆಕ್‌ಲಿಸ್ಟ್ ಮತ್ತು ಗ್ರಾಮ ಪಂಚಾಯತ್ ನೌಕರರ ಮಾಹಿತಿಯನ್ನು ತುಂಬಿ ಪ್ರಸ್ತಾವನೆಯ ಎಲ್ಲಾ ದಾಖಲಾತಿಗಳಿಗೆ ಚಿಕ್ಕ ರುಜು ಮಾಡಿ, ತಮಗೆ ಸಲ್ಲಿಸಿದ್ದಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ, ಠರಾವು ಪುಸ್ತಕವನ್ನು ಅಕ್ರಮವಾಗಿ ಬರೆದಿರುವುದು ತಮ್ಮ ಗಮನಕ್ಕೆ ಬಂದಿಲ್ಲ. ಠರಾವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರು ಸಹಿ ಮಾಡಿರುವುದನ್ನು ಪರಿಶೀಲಿಸಿ, ದಾಖಲಾತಿಗಳನ್ನು ಪರಿಶೀಲನೆಗಾಗಿ ಹಾಗೂ ಅನುಮೋದನೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಒಪ್ಪಿಸಲಾಗಿದೆ. ಸದರಿ ನೌಕರರ ನೇಮಕಾತಿಯ ಪ್ರಸ್ತಾವನೆಯ ದಾಖಲೆಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆ ನೀಡಿದ್ದಾರೆ. ತಪ್ಪು ಮಾಹಿತಿಯಿಂದ ಪಡೆದಿರುವ ನೇಮಕಾತಿಯನ್ನು ರದ್ದುಪಡಿಸಲು ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ)(ನಿಯಮಗಳು), 1977ರ 20ನೇ ನಿಯಮದಲ್ಲಿ ಉಪಬಂದವಿದ್ದು, ಅದರನ್ವಯ ಹಾವೇರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಪತ್ರ ಸಂ:ಹಾಜಿಪಂ\ಆಡಳಿತ-2\ಗ್ರಾಪಂ\ಸಿಬ್ಬಂದಿ\ವಹಿ-32\14-15\17-18\2949ಎ ದಿ:13/12/17ರಲ್ಲಿ ಅನುಮೋದನೆಯನ್ನು ರದ್ದುಗೊಳಿಸಿದ್ದಾರೆ. ದಿನಾಂಕ:08/01/18ರಲ್ಲಿ ನಡೆದ ವಿಶೇಷ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ, 2ನೇ ಎದುರುದಾರರನ್ನು ಕರ ವಸೂಲಿಗಾರರ ಹುದ್ದೆಯಿಂದ ಹಿಂಪಡೆದು ಅವರನ್ನು ಮೂಲ ವಾಟರ್‌ಮನ್ ಹುದ್ದೆಯಲ್ಲಿ ಮುಂದುವರೆಸಿ, ಸರ್ವಾನುಮತದಿಂದ ಠರಾವು ಪಾಸ್ ಮಾಡಿದೆ. 2ನೇ ಎದುರುದಾರರಿಗೆ ಸಂಬಂಧಿಸಿದ ಪ್ರಸ್ತಾವನೆಯ ನ್ಯೂನತೆಗಳ ಬಗ್ಗೆ 4ನೇ ಎದುರುದಾರರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರಣ ಕೇಳುವ ನೋಟೀಸ್ ನೀಡಿದ್ದು, ಸದರಿಯವರು ದಿನಾಂಕ:02/01/18ರಂದು ಉತ್ತರವನ್ನು ನೀಡಿದ್ದಾರೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣಗಳನ್ನು ಉಲ್ಲೇಖಿಸಿ, ಠರಾವು ಪುಸ್ತಕದಲ್ಲಿನ ಅಕ್ರಮ ನಮೂದು ತಮ್ಮ ಗಮನಕ್ಕೆ ಯಾರೂ ತರದಿರುವುದರಿಂದ, 4ನೇ ಎದುರುದಾರರು ಸಲ್ಲಿಸಿದ ದಾಖಲೆಗಳು ಸೃಷ್ಟಿತವೆಂದು ತಿಳಿಯದೇ ಇದ್ದರಿಂದ, ತಾವು ಸಲ್ಲಿಸಿದ ಅನುಮೋದನೆಯನ್ನು ಕರ್ತವ್ಯ ನಿರ್ಲಕ್ಷ್ಯತೆಯೆಂದು ಪರಿಗಣಿಸದೇ, ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಒಂದನೇ ಎದುರುದಾರರು ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ:27/03/07 ರಿಂದ 15/09/09ರವರೆಗೆ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂಬ ಅಂಶ ನಿರ್ವಿವಾದವಾಗಿದೆ. ದಿನಾಂಕ:08/05/07 ಮತ್ತು ದಿನಾಂಕ:15/01/09ರಂದು ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಸಾಮಾನ್ಯ ಸಭೆ ನಡೆದಿದೆಯೆಂದು ಕಡತದಲ್ಲಿ ಲಭ್ಯವಿರುವ ಠರಾವು ವಹಿಯ ಪ್ರತಿಯಲ್ಲಿ ಕಂಡು ಬಂದಿದೆ. ಪಂಚಾಯತ್ ಸಾಮಾನ್ಯ ಸಭೆಗಳಿಗೆ ಸಂಬಂಧಿಸಿದಂತೆ ಎರಡೆರಡು ಠರಾವು ವಹಿಗಳನ್ನು ನಿರ್ವಹಿಸಿರುವುದು ಕಂಡು ಬಂದಿದೆ. ದಿನಾಂಕ:08/05/07ರಂದು ನಡೆದ ಗ್ರಾಮ ಸಭೆಯಲ್ಲಿ ಒಟ್ಟು 10 ವಿಷಯಗಳನ್ನು

ಚರ್ಚಿಸಲಾಗಿದೆಯೆಂದು 1ನೇ ಠರಾವು ವಹಿಯಲ್ಲಿ ಮತ್ತು 2ನೇ ಠರಾವು ವಹಿಯಲ್ಲಿ 11 ವಿಷಯಗಳನ್ನು ಚರ್ಚಿಸಲಾಗಿದೆಯೆಂದು ದಾಖಲಿಸಿರುವುದು ಕಂಡು ಬಂದಿದೆ. ಮುಂದುವರೆದು, ದಿನಾಂಕ:15/01/09ರಂದು ನಡೆದ ಗ್ರಾಮಸಭೆಯಲ್ಲಿ ಒಟ್ಟು 35 ವಿಷಯಗಳನ್ನು ಚರ್ಚಿಸಲಾಗಿದೆಯೆಂದು 1ನೇ ಠರಾವು ವಹಿಯಲ್ಲಿ ಮತ್ತು 2ನೇ ಠರಾವು ವಹಿಯಲ್ಲಿ 36 ವಿಷಯಗಳನ್ನು ಚರ್ಚಿಸಲಾಗಿದೆಯೆಂದು ದಾಖಲಿಸಿರುವುದು ಕಂಡು ಬಂದಿದೆ;

2) ದಿನಾಂಕ:08/05/07ರ 1ನೇ ಠರಾವು ವಹಿಯಲ್ಲಿ ಶ್ರೀ.ನಾಗರಾಜ ದೇವೇಂದ್ರಪ್ಪ ನೇಶ್ವಿ ರವರನ್ನು ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಕರ ವಸೂಲಿಗಾರರ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ ಪಂಚಾಯತ್ ಸಭೆಯಲ್ಲಿ ಯಾವುದೇ ಚರ್ಚೆ ನಡೆದ ಬಗ್ಗೆ ದಾಖಲಾಗಿಲ್ಲ. ಆದರೆ, 2ನೇ ಠರಾವು ವಹಿಯ ವಿಷಯ ಸಂಖ್ಯೆ:3/11ರಲ್ಲಿ ಸದರಿ ಶ್ರೀ.ನಾಗರಾಜ ದೇವೇಂದ್ರಪ್ಪ ನೇಶ್ವಿ ರವರನ್ನು ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಕರ ವಸೂಲಿಗಾರರ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ ಪಂಚಾಯತ್ ಸಭೆಯಲ್ಲಿ ಚರ್ಚೆ ನಡೆದಿದೆಯೆಂದು ದಾಖಲಾಗಿದೆ. ಅದೇ ರೀತಿ, ದಿನಾಂಕ:15/11/09ರ 1ನೇ ಠರಾವು ವಹಿಯಲ್ಲಿ ವಿಷಯ ಸಂಖ್ಯೆ:4ರಲ್ಲಿ "ಸಾರ್ವಜನಿಕರಿಂದ ಬಂದ ಅರ್ಜಿಯ ವಿಚಾರ" ದ ಬಗ್ಗೆ ಚರ್ಚೆ ನಡೆದು ಠರಾವು ಪಾಸ್ ಆಗಿದೆಯೆಂದು ಕಂಡು ಬಂದಿದ್ದು, 2ನೇ ಠರಾವು ವಹಿಯಲ್ಲಿ ವಿಷಯ ಸಂಖ್ಯೆ:4ರಲ್ಲಿ "ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಕರ ವಸೂಲಿಗಾರರ ಹುದ್ದೆಗೆ ಶ್ರೀ.ಕರಬಸಪ್ಪ ಬ ನೇಶ್ವಿ ರವರನ್ನು ನೇಮಕಾತಿ ಮಾಡುವ ಕುರಿತು" ಚರ್ಚೆ ನಡೆದು ಠರಾವು ಆಗಿದೆಯೆಂದು ದಾಖಲಾಗಿದೆ;

3) ದಿನಾಂಕ:08/05/07 ಮತ್ತು 15/01/09ರಂದು 1ನೇ ಎದುರುದಾರರು ಸದರಿ ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪಂಚಾಯತ್ ಸಾಮಾನ್ಯ ಸಭೆಯ ಠರಾವುಗಳನ್ನು ದಾಖಲಿಸಿ, ಠರಾವು ವಹಿಯನ್ನು ನಿರ್ವಹಿಸುವುದು ಸದರಿಯವರ ಕರ್ತವ್ಯವಾಗಿದೆ. ಪಂಚಾಯತ್ ಕಾರ್ಯದರ್ಶಿಯಾಗಿ ಅವರೇ ಸ್ವತಃ ಪಂಚಾಯತ್ ಠರಾವುಗಳನ್ನು ಬರೆಯ ಬೇಕಾಗಿದ್ದು, ಸದರಿಯವರು ಎರಡೆರಡು ಠರಾವು ವಹಿಗಳನ್ನು ನಿರ್ವಹಿಸಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಮೊದಲನೇ ಠರಾವು ವಹಿಯನ್ನು 1ನೇ ಎದುರುದಾರರು ಬರೆದಿದ್ದಾರೆಂದು ಹೇಳಿದ್ದು, 2ನೇ ಠರಾವು ವಹಿಯನ್ನು 1ನೇ ಎದುರುದಾರರು ಶ್ರೀ.ಮಂಜಪ್ಪ ಹೊಸಮನಿ ಎಂಬುವವರಿಂದ ದಾಖಲಿಸಿಕೊಳ್ಳುತ್ತಿದ್ದರೆಂದು ಹೇಳಲಾಗಿದೆ. ಸದರಿ ಅಂಶವನ್ನು ಸ್ವತಃ ಶ್ರೀ.ಮಂಜಪ್ಪ ಹೊಸಮನಿ ರವರೇ ತನಿಖಾಧಿಕಾರಿಗಳ ಸಮ್ಮುಖ ಒಪ್ಪಿಕೊಂಡಿದ್ದಾರೆ. ಸದರಿ ಶ್ರೀ.ಮಂಜಪ್ಪ ಹೊಸಮನಿ ರವರು ಖಾಸಗಿ ವ್ಯಕ್ತಿಯಾಗಿದ್ದು, ಸದರಿಯವರಿಗೆ ಗ್ರಾಮ ಪಂಚಾಯತ್‌ನ ಠರಾವು ವಹಿಯನ್ನು ಬರೆಯಲು ಯಾವುದೇ ಅಧಿಕಾರ ಇಲ್ಲದಿದ್ದರೂ, 1ನೇ ಎದುರುದಾರರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಠರಾವು ವಹಿಯನ್ನು ಅವರಿಂದ ಬರೆಸಿರುವುದು ಕಂಡು ಬಂದಿದೆ. ಸದರಿ ಖಾಸಗಿ ವ್ಯಕ್ತಿ ಶ್ರೀ.ಮಂಜಪ್ಪ ಹೊಸಮನಿ ರವರು ಬರೆದ ಠರಾವು ವಹಿಯಲ್ಲಿ ಖೊಟ್ಟಿ ವಿಷಯಗಳನ್ನು ಸೇರ್ಪಡೆ ಮಾಡಿ, ದಾಖಲೆಗಳ ಸೃಷ್ಟನೆಗೆ ಕಾರಣರಾಗಿರುವುದು ಕಂಡು ಬಂದಿದೆ;

Bsm 11628/18



4) ಸದರಿ ಎರಡು ಠರಾವು ವಹಿಗಳನ್ನು ನಿರ್ವಹಿಸುವಲ್ಲಿ ಮತ್ತು 2ನೇ ವಹಿಯಲ್ಲಿ ಖೊಟ್ಟಿ ವಿಷಯಗಳನ್ನು ಸೇರ್ಪಡೆ ಮಾಡುವಲ್ಲಿ 3ನೇ ಎದುರುದಾರರೂ ಭಾಗಿಯಾಗಿದ್ದಾರೆಂದು ಹೇಳಲು ಯಾವುದೇ ದಾಖಲೆಗಳಿಲ್ಲ.

5) ನಾಲ್ಕನೇ ಎದುರುದಾರರು ದಿನಾಂಕ:21/10/13 ರಿಂದ 13/09/16ರವರೆಗೆ ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. 2ನೇ ಎದುರುದಾರರು ಹಲಗೇರಿ ಗ್ರಾಮ ಪಂಚಾಯತ್‌ನಲ್ಲಿ ಕರವಸೂಲಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ 4ನೇ ಎದುರುದಾರರಿಗೆ 2ನೇ ಎದುರುದಾರರ ಬಾಬ್ತು ಅನಧಿಕೃತ ಗೈರು ಹಾಜರಾಗಿಲ್ಲವೆಂಬ ದೃಢೀಕರಣ ಪತ್ರ, ಸದರಿಯವರ ಜಾತಿ ದೃಢೀಕರಣ ಪತ್ರ, 2ನೇ ಎದುರುದಾರರನ್ನು ಕರ ವಸೂಲಿಗಾರರಾಗಿ ನೇಮಕ ಮಾಡಲು ತೀರ್ಮಾನಿಸಿ ದಿನಾಂಕ:15/01/09ರಂದು ಪಂಚಾಯತ್ ಸಭೆಯಲ್ಲಿ ತೀರ್ಮಾನವಾಗಿದೆಯೆನ್ನಲಾದ ಠರಾವಿನ ದೃಢೀಕೃತ ಪ್ರತಿ, ನಮೂನೆ–1 ರಿಂದ 4ರ ಮಾಹಿತಿ, ಮುಂತಾದ ದಾಖಲೆಗಳನ್ನು ಸಲ್ಲಿಸಿದ್ದಾರೆ. 4ನೇ ಎದುರುದಾರರು ದೃಢೀಕರಿಸಿ ಸಲ್ಲಿಸಿದ ದಾಖಲೆ ಮತ್ತು ಇತರೆ ಮಾಹಿತಿಗಳನ್ನು 5ನೇ ಎದುರುದಾರರು ಖುದ್ದಾಗಿ ಪರಿಶೀಲಿಸದೇ ಸದರಿ ದಾಖಲೆಗಳನ್ನು ತಾಲ್ಲೂಕ್ ಪಂಚಾಯತ್ ಕಛೇರಿ ವ್ಯವಸ್ಥಾಪಕರಾದ ಶ್ರೀ.ಬಸವೇಶ ಶಿವಪ್ಪ ಶಿಡೇನೂರ ರವರಿಗೆ ನೀಡಿರುವುದು 5ನೇ ಎದುರುದಾರರ ಆಕ್ಷೇಪಣೆಯಿಂದ ಕಂಡು ಬಂದಿದೆ. ಸದರಿ ಶ್ರೀ.ಬಸವೇಶ ಶಿವಪ್ಪ ಶಿಡೇನೂರ ರವರು ದಾಖಲೆಗಳನ್ನು ಪರಿಶೀಲನೆ ಮಾಡಿ, ಚಿಕ್ಕ ರುಜು ಮಾಡಿ, 5ನೇ ಎದುರುದಾರರಿಗೆ ಸಲ್ಲಿಸಿದ್ದಾರೆನ್ನಲಾದ ನಂತರ 5ನೇ ಎದುರುದಾರರು ಸದರಿ ದಾಖಲಾತಿಗಳನ್ನು ಪರಿಶೀಲನೆಗೆ ಮತ್ತು ಅನುಮೋದನೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿರುವುದು ಕಂಡು ಬಂದಿದೆ. 4ನೇ ಎದುರುದಾರರು ದೃಢೀಕರಿಸಿ ಸಲ್ಲಿಸಿದ ದಾಖಲೆಗಳನ್ನು 5ನೇ ಎದುರುದಾರರು ಖುದ್ದಾಗಿ ಪರಿಶೀಲಿಸದೇ ತಾಲ್ಲೂಕ್ ಪಂಚಾಯತ್ ಸಿಬ್ಬಂದಿಯವರು ಮಾಡಿದ ದಾಖಲೆಗಳ ಪರಿಶೀಲನೆ ಆಧಾರದ ಮೇಲೆ 2ನೇ ಎದುರುದಾರರ ಪ್ರಸ್ತಾವನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

6) ಎರಡನೇ ಎದುರುದಾರರನ್ನು ಹಲಗೇರಿ ಗ್ರಾಮ ಪಂಚಾಯತ್ ಕರ ವಸೂಲಿಗಾರರ ಹುದ್ದೆಗೆ ನೇಮಕ ಮಾಡಲು ತೀರ್ಮಾನಿಸಿದ ಪಂಚಾಯತ್ ಠರಾವು ಖೊಟ್ಟಿಯಾಗಿ ದಾಖಲಿಸಿದ ಠರಾವು ಆಗಿದ್ದು, ದಿ:15/01/09 ರಂದು ನಡೆದ ಹಲಗೇರಿ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಸದರಿಯವರನ್ನು ಕರ ವಸೂಲಿಗಾರರ ಹುದ್ದೆಗೆ ನೇಮಿಸಿಕೊಳ್ಳಲು ಯಾವುದೇ ಚರ್ಚೆ ನಡೆದಿಲ್ಲವೆಂದು ಇನ್ನೊಂದು ಠರಾವು ವಹಿಯಲ್ಲಿ ಕಂಡು ಬಂದಿದೆ. ಸದರಿ ಖೊಟ್ಟಿ ಠರಾವು ದಾಖಲಿಸುವಲ್ಲಿ 1 ಮತ್ತು 2ನೇ ಎದುರುದಾರರು ನೇರವಾಗಿ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾ ವರದಿ ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1, 2, 4 ಮತ್ತು 5ನೇ ಎದುರುದಾರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಒಂದನೇ (1ನೇ) ಎದುರುದಾರರು ದಿನಾಂಕ:30/04/14ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ಸದರಿಯವರು ವಯೋ ನಿವೃತ್ತಿ ಹೊಂದಿ 4 ವರ್ಷಗಳು ಮೇಲ್ಪಟ್ಟಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2)(ಬಿ) ಅಡಿ ಕಾಲಮಿತಿ ಬಾಧಕವಿದ್ದರೂ, ಸದರಿ ಕಾಲಮಿತಿ ಬಾಧಕವನ್ನು ಮನ್ನಿಸಿ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಅನುಮತಿ ನೀಡುವ ಪ್ರಕರಣವಾಗಿದೆ.

11. ಮೂರನೇ (3ನೇ) ಎದುರುದಾರರ ಯಾವುದೇ ಕರ್ತವ್ಯ ಲೋಪ ಕಂಡು ಬರದೇ ಇರುವುದರಿಂದ, 3ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1, 2, 4 ಮತ್ತು 5ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಅದಲ್ಲದೆ 1, 2, 4 ಮತ್ತು 5ನೇ ಎದುರದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಮತ್ತು ಖೊಟ್ಟಿ ಪಂಚಾಯತ್ ಠರಾವು ವಹಿಯನ್ನು ಬರೆಯಲು 1ನೇ ಎದುರುದಾರರಿಗೆ ಸಹಕರಿಸಿದ ಶ್ರೀ.ಮಂಜಪ್ಪ ಬಿನ್ ನಾಗಪ್ಪ ಹೊಸಮನಿ ಮತ್ತು 1ನೇ ಎದುರುದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು

BS(?)/ 1628/18



ಮಾಡಲಾಗುತ್ತಿದೆ, ಹಾಗೂ 1ನೇ ಎದುರುದಾರರು ದಿನಾಂಕ:30/04/2014 ರಂದು ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1ನೇ ಎದುರುದಾರರು ದಿನಾಂಕ:30/04/2014ರಂದು ನಿವೃತ್ತಿ ಹೊಂದಿದ್ದಾರೆ.

N. Anand 14/11

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

13/4